ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ರಿಪೇರಿ ಮಾಡಿಸುವಂಥ ಕೆಲಸವನ್ನು ಈ ಸಾರಿ ಮಾಡಿಸುತ್ತೇನೆ. ಇನ್ನು ಹುದ್ದೆಗಳ ಬಗ್ಗೆ ಹೇಳಬೇಕೆಂದರೆ, ಈಗಾಗಲೇ 850 ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 399 ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಿದ್ದೇವೆ. ಈ ಹುದ್ದೆಗಳಲ್ಲಿ ಇರತಕ್ಕಂಥವರಲ್ಲಿ ಯಾರು ಕಾರವಾರ ಜಿಲ್ಲೆಗೆ ಹೋಗುತ್ತಾರೋ ಎಲ್ಲರನ್ನೂ ಅಲ್ಲಿಗೆ ಕಳುಹಿಸಿಕೊಟ್ಟು ಪೂರ್ತಿ ಭರ್ತಿ ಮಾಡುವಂಥ ಕೆಲಸ ಮಾಡಿ ಅಲ್ಲಿ ತೋಟಗಾರಿಕೆ 90% ಗಿಂತಲೂ ಹೆಚ್ಚಿಗೆ ಇರುವುದರಿಂದ ಅಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡುವಂಥ ಕೆಲಸವನ್ನು ಮಾಡುತ್ತೇನೆ.

ಮೀನುಗಾರಿಕೆ ಉತ್ಪಾದನೆಯಿಂದ ಬಂದ ಆದಾಯ

62 (121) ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಚಿತ್ರದುರ್ಗ ಜಿಲ್ಲೆ ವಾಣಿವಿಲಾಸ ಜಲಾಶಯದಲ್ಲಿ ಮೀನುಗಾರಿಕೆ, ಉತ್ಪಾದನೆ ವಿತರಣೆಯಿಂದ ಕಳೆದ ಮೂರು ವರ್ಷಗಳಿಂದ ಬಂದ ಆದಾಯವೆಷ್ಟು; ಪ್ರತಿವರ್ಷ ಗುತ್ತಿಗೆ ನೀಡಲು ಅವಕಾಶವಿದೆಯೇ; ಈ ಸಾರಿ ಗುತ್ತಿಗೆ ಯಾರಿಗೆ ನೀಡಲಾಗಿದೆ; ಗುತ್ತಿಗೆ ನೀಡಿಕೆಯಲ್ಲಿ ನಿಯಮ ಮೀರಿ ಗುತ್ತಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಜಲಾಶಯದಲ್ಲಿ ಮೀನು ಉತ್ಪಾದನೆ ನಿರ್ವಹಣೆ ಇದನ್ನೇ ನಂಬಿಕೊಂಡ ಮೀನು ಸಾಕಾಣಿಕೆ ಮಾರಾಟಗಾರರ ಸಂಖ್ಯೆ ಎಷ್ಟು;

ಆ) ಈ ಜಲಾಶಯದಲ್ಲಿ ಮೀನುಮರಿ ಸಾಕಾಣಿಕೆ, ನಿರ್ವಹಣೆ, ಮಾರಾಟ ಇತ್ಯಾದಿ ಚಟುವಟಿಕೆಗೆ ಇತ್ತೀಚೆಗೆ ನೀಡಿದ ಸರ್ಕಾರಿ ಆದೇಶ ಹಿಂಪಡೆದು ಹೊಸ ನಿಯಮಾನುಸಾರ ಆದೇಶ ಹೊರಡಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ; ಯಾವಾಗ ಆದೇಶ ಹೊರಡಿಸಲಾಗುವುದು; (ವಿವರ ನೀಡುವುದು)

ಇ) ಹೊಸದುರ್ಗ ತಾಲ್ಲೂಕಿನಲ್ಲಿರುವ ಮೀನುಗಾರರ ಸಂಖ್ಯೆ ಎಷ್ಟು;

ಈ) ಎಷ್ಟು ಕೆರೆಗಳಲ್ಲಿ ಮೀನು ಉತ್ಪಾದನೆಯಾಗುತ್ತದೆ; ಇದರಿಂದ ಬರುವ ವಾರ್ಷಿಕ ಲಾಭವೆಷ್ಟು;

ಉ) ಗುತ್ತಿಗೆ ನೀಡಲು ಅನುಸರಿಸುವ ಕ್ರಮಗಳೇನು;

ಊ) ನಿಯಮ ಮೀರಿ ಗುತ್ತಿಗೆ ನವೀಕರಣ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆನಂದ ವಸಂತ ಅಸ್ನೋಟಿಕರ್ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ವಾಣಿವಿಲಾಸ ಸಾಗರ ಜಲಾಶಯದಲ್ಲಿ ಕಳೆದ ಮೂರು ವರ್ಷ ಗಳಿಂದ ಸ್ಥಳೀಯ ಮೀನುಗಾರರಿಗೆ ಪರವಾನಗಿ ನೀಡಿದ್ದು, ಅದರಿಂದ ಬಂದ ಆದಾಯದ ವಿವರ ಈ ಕೆಳಕಂಡಂತಿದೆ:

ಕ್ರ ಸಂ.	ವರ್ಷ	ಆದಾಯ (ರೂ.ಗಳಲ್ಲಿ)
1	2009–10	–
2	2010–11	66,000
3	2011–12	1,54,000

ಪ್ರತಿವರ್ಷ ಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/167/ಮೀಇಇ/2005 ದಿನಾಂಕ: 28/1/2006ರ ಗುತ್ತಿಗೆ ನಿಯಮಾವಳಿಯಂತೆ ಸ್ಥಳೀಯ ಮೀನು ಗಾರರಿಗೆ ಪರವಾನಗಿ ನೀಡಲಾಗಿರುತ್ತದೆ. ಯಾವುದೇ ಆದೇಶ/ ನಿಯಮ ಮೀರಿ ಗುತ್ತಿಗೆ ನೀಡಿರುವುದಿಲ್ಲ.

ಈ ಜಲಾಶಯದ ವ್ಯಾಪ್ತಿಯಲ್ಲಿ ಅಂದಾಜು 475 ಮೀನುಗಾರರಿದ್ದು, ಇದನ್ನೇ ನಂಬಿಕೊಂಡು ಸುಮಾರು 204 ಮೀನುಗಾರರಿರುತ್ತಾರೆ.

ಆ) 8,640 ಹೆಕ್ಟೇರ್ ಜಲವಿಸ್ತೀರ್ಣ ಹೊಂದಿರುವ ಈ ಜಲಾಶಯದ ಮೀನು ಪಾಶೂವಾರು ಹಕ್ಕನ್ನು ಪರವಾನಗಿ ಮೂಲಕ ವಿಲೇವಾರಿ ಮಾಡಿದಾಗ ಮೀನು ಉತ್ಪಾದನೆ ನಿರೀಕ್ಷಿತ ಪ್ರಮಾಣದಲ್ಲಿ ಆಗದೇ, ಜಲಾಶಯದ ಮೀನುಗಾರರ ತಲಾ ಆದಾಯ ಹೆಚ್ಚಾಗದೇ ಮೀನು ಉತ್ಪಾದನೆ ಕುಂಠಿತವಾಗುವ ಸಾಧ್ಯತೆ ಇರುವುದರಿಂದ ಹಾಗೂ ಜಲಾಶಯದಲ್ಲಿ ನಿರಂತರವಾಗಿ ನಿಗದಿತ ಪ್ರಮಾಣದಲ್ಲಿ ಮೀನುಮರಿ ಗಳನ್ನು ದಾಸ್ತಾನು ಮಾಡಲು ಇಲಾಖೆಯಲ್ಲಿ ಯಾವುದೇ ಕಾರ್ಯಕ್ರಮ ಇಲ್ಲದಿರುವುದರಿಂದ, ಜಲಾಶಯದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರಿ–ಖಾಸಗಿ

ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ಈಗಾಗಲೇ 2012–13ನೇ ಸಾಲಿನಿಂದ ಐದು ವರ್ಷಗಳ ಅವಧಿಗೆ ಜಲಾಶಯವನ್ನು ಸರ್ಕಾರಿ – ಖಾಸಗಿ ಸಹಭಾಗಿತ್ವದಲ್ಲಿ (ಮೀನುಗಾರಿಕೆ ಇಲಾಖೆ ಮತ್ತು ವ್ಯಕ್ತಿ/ಸಂಸ್ಥೆ) ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ/162/ಮೀಇಇ/2011 ದಿನಾಂಕ: 31/12/2011 ರಂತೆ ಶ್ರೀ ಸಿ. ನಟರಾಜ್, ಮೆ॥ ಭಾಗ್ಯ ಫಿಶ್ ಫಾರಂ, ಸಾಲುಹುಣಸೆ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಖಾಸಗೀ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಆದೇಶ ಹೊರಡಿಸಲಾಗಿದೆ.

ಇ) ಹೊಸದುರ್ಗ ತಾಲ್ಲೂಕಿನಲ್ಲಿ ಅಂದಾಜು 1,000 ಜನ ಮೀನು ಗಾರರಿದ್ದಾರೆ.

ಈ) ಹೊಸದುರ್ಗ ತಾಲ್ಲೂಕಿನಲ್ಲಿ 40 ಹೆಕ್ಟೇರಿಗಿಂತಲೂ ಹೆಚ್ಚು ಅಚ್ಚುಕಟ್ಟು ಪ್ರದೇಶ ಇರುವ ಮೀನುಗಾರಿಕೆ ಇಲಾಖೆಯ 15 ಕೆರೆಗಳಲ್ಲಿ ಹಾಗೂ 40 ಹೆಕ್ಟೇರಿಗಿಂತಲೂ ಕಡಿಮೆ ಅಚ್ಚುಕಟ್ಟು ಪ್ರದೇಶ ಇರುವ ಗ್ರಾಮ ಪಂಚಾಯತ್ ವ್ಯಾಪ್ತಿಯ 35 ಕೆರೆಗಳಲ್ಲಿ ಮೀನು ಉತ್ಪಾದನೆಯಾಗುತ್ತಿದೆ.

ಹೊಸದುರ್ಗ ತಾಲ್ಲೂಕಿನಲ್ಲಿ 40 ಹೆಕ್ಟೇರಿಗಿಂತಲೂ ಹೆಚ್ಚು ಅಚ್ಚುಕಟ್ಟು ಪ್ರದೇಶ ಇರುವ ಮೀನುಗಾರಿಕೆ ಇಲಾಖೆಯ 15 ಕೆರೆಗಳ ವಿಲೇವಾರಿಯಿಂದ 2011–12ನೇ ಸಾಲಿನಲ್ಲಿ ಸರ್ಕಾರಕ್ಕೆ ರೂ.5,30,960–00 ಗಳ ಆದಾಯ ಬಂದಿರುತ್ತದೆ.

ಉ) ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ/167ಮೀಇಇ/2005 ದಿನಾಂಕ: 28/01/2006ರಲ್ಲಿನ ಮಾರ್ಗಸೂಚಿಯಂತೆ 40 ಹೆಕ್ಟೇರ್‌ಗಿಂತಲೂ ಹೆಚ್ಚು ಅಚ್ಚುಕಟ್ಟು ಪ್ರದೇಶ ಇರುವ ಕೆರೆಗಳನ್ನು ಮೊದಲು ಆದ್ಯತೆ ಮೇರೆಗೆ ಸಂಘ/ಸಂಸ್ಥೆ/ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಿ ನೇರ ಗುತ್ತಿಗೆ ಮೂಲಕ ವಿಲೇಗೊಳಿಸಲಾಗುವುದು. ಎಲ್ಲೆಲ್ಲಿ ಸಂಘ/ಸಂಸ್ಥೆ/ವ್ಯಕ್ತಿಗಳಿಗೆ ಸೀಮಿತಗೊಳಿಸಿ ವಿಲೇಗೊಳಿಸಲು ಸಾಧ್ಯವಾಗದ ಕೆರೆಗಳನ್ನು ಮಾತ್ರ ಟೆಂಡರು–ಕಂ–ಹರಾಜು ಮೂಲಕ ಬಹಿರಂಗ ವಿಲೇ ಮಾಡಲಾಗುವುದು. 40 ಹೆಕ್ಟೇರಿಗಿಂತಲೂ ಕಡಿಮೆ ಅಚ್ಚುಕಟ್ಟು ಇರುವ ಕೆರೆಗಳನ್ನು ಆಯಾಯ ಗ್ರಾಮ ಪಂಚಾಯತಿ ಗಳಿಂದ ವಿಲೇಗೊಳಿಸಲಾಗುತ್ತಿದೆ.

ಊ) ಹೊಸದುರ್ಗ ತಾಲ್ಲೂಕಿನಲ್ಲಿ ನಿಯಮ ಮೀರಿ ಗುತ್ತಿಗೆ ನವೀಕರಣ ಮಾಡಿದ ಪ್ರಕರಣಗಳು ಇರುವುದಿಲ್ಲ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಮೊದಲ ಮನವಿಯೇನೆಂದರೆ, ಮಾನ್ಯ ಸಚಿವರು ಏನು ಆದೇಶವನ್ನು ಈಗಾಗಲೇ ಮಾಡಿದ್ದಾರೆ ಅದನ್ನು ವಾಪಸ್ ತೆಗೆದು ಕೊಳ್ಳಬೇಕು. ಏಕೆಂದರೆ ವಾಣಿವಿಲಾಸ ಜಲಾಶಯದಲ್ಲಿ ಬಹಳಷ್ಟು ಬಡ ಮೀನುಗಾರರಿಗೆ ತೊಂದರೆಯಾಗುತ್ತಿದೆ. ಈ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವವೇನಿದೆ ಇದೊಂದು ದುಡ್ಡು ಹೊಡೆಯುವಂಥ ಕಾರ್ಯಕ್ರಮ, ಇಲಾಖಾ ಅಧಿಕಾರಿಗಳು ಮತ್ತು ಅಲ್ಲಿರತಕ್ಕಂಥ ಖಾಸಗಿ ವ್ಯಕ್ತಿಗಳು ಮಾಡತ ಕ್ಕಂಥದ್ದು. ಈಗ ಹೊರಡಿಸಿರುವ ಆದೇಶ ಬಹಳ ಮಾರಕವಾಗಿದೆ. ಬಡ ಮೀನುಗಾರರಿಗೆ ಮಾರಕವಾಗಿದೆ. ಮೀನುಗಾರರ ಕುಟುಂಬಗಳಿಗೆ ಮಾರಕ ವಾಗಿದೆ. ಇನ್ನೂ ಆರು ತಿಂಗಳುಗಳ ಕಾಲವಿದ್ದರೂ ಕೂಡ ಯಾವುದೋ ಒಂದು ಕುಂಟು ನೆಪವೊಡ್ಡಿ ಆದೇಶವನ್ನು ಮಾಡಿರುತ್ತಾರೆ. ದಯಮಾಡಿ ಈಗ ಮಾಡಿರುವ ಆದೇಶವನ್ನು ಕೂಡಲೇ ಹಿಂಪಡೆದು ಹೊಸದಾಗಿ ಅವಕಾಶವನ್ನು ಮಾಡಿಕೊಡಬೇಕು. ಇವರು ಪ್ರಚಾರ ಮಾಡದೆ ಒಳಗೊಳಗೇ ಒಂದು ರೀತಿ combined ಆಗಿ ಯಾವ ಕಂಪನಿಗೆ ಕೊಟ್ಟಿದ್ದಾರೋ ಅವರಿಗೆ ಇಲಾಖೆಯ ಅಧಿಕಾರಿಗಳು ಅವರ ಸಂಬಂಧಿಕರಾ ಗಿದ್ದಾರೆ. ಹೀಗಾಗಿ ಪ್ರಚಾರ ಮಾಡದೆ, ಏನೂ ಮಾಡದೇ ಯಾರಿಗೂ ಗೊತ್ತಾಗದ ಹಾಗೆ ಮಾಡಿರುವ ಆದೇಶವಾಗಿದೆ. ಆದುದರಿಂದ ಈ ಆದೇಶವನ್ನು ರದ್ದು ಮಾಡಿ ಬಡ ಮೀನುಗಾರರ ಸಹಕಾರಕ್ಕೆ ಬರಬೇಕು. ಇದನ್ನು ಮಾಡಲಿಲ್ಲವೆಂದರೆ, ನಾನು ಪ್ರತಿಭಟನೆಯನ್ನು ಮಾಡುವ ಕೆಲಸವನ್ನು ಮಾಡಬೇಕಾಗುತ್ತದೆ. ದಯಮಾಡಿ ತಾವು ಇದಕ್ಕೆ ಅವಕಾಶ ಕೊಡದ ಹಾಗೆ ತಾವು ಒತ್ತಡ ಹೇರಿ ಈಗ ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆನಂದ ವಸಂತ ಅಸ್ನೋಟಿಕರ್ : ಮಾನ್ಯ ಅಧ್ಯಕ್ಷರೆ, ಹಿರಿಯೂರು ತಾಲ್ಲೂಕಿನಲ್ಲಿರುವ ವಾಣಿ ವಿಲಾಸ ಜಲಾಶಯ ಸುಮಾರು 804 ಹೆಕ್ಟೇರ್‌ನಷ್ಟು ಹೆಚ್ಚು ವಿಸ್ತಾರವಾಗಿ ಹಬ್ಬಿದೆ. ಇದು ಬಹಳ ದೊಡ್ಡ ಜಲಾಶಯವಾಗಿದೆ. ಇದು ಇನ್ನೂ ಹೆಚ್ಚು ಅಭಿವೃದ್ಧಿ ಮಾಡಬೇಕೆಂದು ನಮ್ಮ ಇಲಾಖೆಯವರು ಈ ಮುಂಚೆ ಆ ಭಾಗದ ಸ್ಥಳೀಯ ಮೀನುಗಾರರಿಗೆ ಅವಕಾಶವನ್ನು ನೀಡಿದರು. ಲೈಸೆನ್ಸ್ ಮುಖಾಂತರ ಅವರಿಗೆ ಮೀನುಗಾರಿಕೆ ಮಾಡುವುದಕ್ಕೆ ಅವಕಾಶವನ್ನು ಕೊಡಲಾಗಿತ್ತು. ಆದರೂ ಕೂಡ ಆ ಭಾಗದ ಮೀನುಗಾರರ ಆರ್ಥಿಕ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗಲಿಲ್ಲ. ಇದರಿಂದ ನಮ್ಮ ಇಲಾಖೆಗೂ ಕೂಡ ಯಾವುದೇ ಲಾಭವಾಗಿಲ್ಲ. ಈ ಹಿನ್ನೆಲೆಯಲ್ಲಿ ಈ

ಮೊದಲು ಸಹ ಪಿ.ಪಿ.ಪಿ. ಮಾಡೆಲ್‌ನಲ್ಲಿ ಕೊಟ್ಟಿದ್ದೆವು. 2012–13ನೇ ಸಾಲಿನಲ್ಲಿ ನಾವು ಅತಿ ಪಾರದರ್ಶಕತೆಯಿಂದ ಟೆಂಡರ್ ಮುಖಾಂತರ ಪಿ.ಪಿ.ಪಿ. ಮಾಡೆಲ್ ಮುಖಾಂತರ ಆ ಭಾಗದಲ್ಲಿರುವ ಭಾಗ್ಯ ಫಾರ್ಮ್ ಎನ್ನುವ ಸ್ಥಳೀಯ ಏಜೆನ್ಸಿಯವರು ಟೆಂಡರ್ ಕರೆದಿದ್ದಾಗ ಅರ್ಜಿಯನ್ನು ಸಲ್ಲಿಸಿದ್ದರು. ಅವರಿಗೆ ಟೆಂಡರ್‌ನಲ್ಲಿ ಹೇಳಿದಂತೆ ಎಲ್ಲಾ ಪ್ರೊಸೀಜರ್‌ಗಳನ್ನು ಫಾಲೋ ಮಾಡಿ ನಾವು ಟೆಂಡರ್ ಮುಖಾಂತರ ನೀಡಿದ್ದೇವೆ. ಮುಖ್ಯವಾಗಿ ಆ ಭಾಗದ ಮೀನುಗಾರರ ರಕ್ಷಣೆಗಾಗಿ ಮೀನುಗಾರರಿಗೆ ಅನುಕೂಲ ಮಾಡಲೆಂದೇ ವಿಶೇಷವಾಗಿ ಜಲಾಶಯ ಅಭಿವೃದ್ಧಿ ಸಮಿತಿಯೆಂದು ರಚನೆ ಮಾಡಿ ಅದರಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಆ ಭಾಗದ ಮೀನುಗಾರರನ್ನೂ ಸಹ ಸದಸ್ಯರನ್ನಾಗಿ ಮಾಡಿ ಅವರಿಗೆ ಅನುಕೂಲ ಸಿಗಲೆಂದು ಈ ಒಂದು ಕಮಿಟಿಯನ್ನು ಮಾಡಿದ್ದೇವೆ, ಮುಖ್ಯವಾಗಿ ಈ ಒಂದು ಟೆಂಡರ್ ಪ್ರಕ್ರಿಯೆಯಲ್ಲಿ ನಾವು ಏನು ಕಂಡೀಶನ್ ಹಾಕಿದ್ದೇವೆಂದರೆ, ಆ ಭಾಗದ ಮೀನುಗಾರರಿಗೆ ಈ ಟೆಂಡರ್ ತೆಗೆದುಕೊಂಡಿರುವಂಥ ಕಂಪನಿಗೆ ಸಿಗುವಂಥ ರೆವಿನ್ಯೂ ಏನಿದೆ ಆ ರೆವಿನ್ಯೂವಿನ ಅರ್ಧ ಭಾಗವನ್ನು ಅವರಿಗೆ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಆದುದರಿಂದ ಇದರಲ್ಲಿ ಮೀನುಗಾರರಿಗೆ ಯಾವುದೇ ರೀತಿಯಲ್ಲಿಯೂ ಅನ್ಯಾಯವಾಗುವುದಕ್ಕೆ ಸಾಧ್ಯವಿಲ್ಲ. ಅವರ ರಕ್ಷಣೆಗಾಗಿ ನಾವು ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸಬಯಸುತ್ತೇನೆ. ಈಗಾಗಲೇ ಸ್ಥಳೀಯ ಮೀನುಗಾರರು ಟೆಂಡರ್ ವಿರುದ್ಧ ಹೈಕೋರ್ಟ್‌ಗೂ ಸಹ ಅಪೀಲ್ ಮಾಡಿದ್ದರು. ಹೈಕೋರ್ಟ್‌ನವರು ನಮ್ಮ ಇಲಾಖೆ ಮಾಡಿದಂಥ ಕ್ರಮವನ್ನು upheld ಮಾಡಿದೆ. ಆದುದರಿಂದ ಇದರಲ್ಲಿ ಮೀನುಗಾರರಿಗೆ ಅನ್ಯಾಯವಾಗುವ ಯಾವುದೇ ಅಂಶವಿಲ್ಲ. ಇದರ ಜೊತೆಗೆ ಮುಂದಿನ ಸಂದರ್ಭದಲ್ಲಿಯೂ ಕೂಡ ಮೀನುಗಾರರಿಗೆ ಮತ್ತಷ್ಟು ರಕ್ಷಣೆ ಕೊಡುವಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮೊದಲು ಅವರಿಗಾಗಿ ಮೀಸಲಿರಿಸಿರುವ ಜಾಗದಲ್ಲಿ ನಿಂತು ಉತ್ತರ ಕೊಡುತ್ತಿದ್ದಾರೆಯೇ ಎಂಬುದನ್ನು ನೀವು ಕೇಳಿ. ಬೇರೆಯವರ ಸೀಟಿನ ಮುಂದೆ ನಿಂತು ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ನಿಮ್ಮ ಜಾಗಕ್ಕೆ ಹೋಗಿ ಉತ್ತರವನ್ನು ಕೊಡಿ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಸೀಟಿನ ಮುಂದೆ ನಿಂತು ಉತ್ತರ ಕೊಡದೆ ಬೇರೆಯವರ ಸೀಟಿನ ಮುಂದೆ ನಿಂತು ಹೇಗೆ ಉತ್ತರ ಕೊಡುತ್ತಿದ್ದಾರೋ ಅದೇ ರೀತಿ ಈ ಆದೇಶವನ್ನೂ ಕೂಡ ಮಾಡಿದ್ದಾರೆ. ಮೊದಲು ಈ ಆದೇಶವನ್ನು ಹಿಂಪಡೆಯಬೇಕು.

ಅಧ್ಯಕ್ಷರು : ಮೊದಲು ಸಚಿವರು ಉತ್ತರ ಹೇಳುವುದಕ್ಕೆ ಬಿಡಿ. ನೀವು ಕುಳಿತುಕೊಳ್ಳಿ.

ಶ್ರೀ ಆನಂದ ವಸಂತ ಅಸ್ನೋಟಿಕರ್ : ಮಾನ್ಯ ಅಧ್ಯಕ್ಷರೆ, ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದೇನೆ. ಇವತ್ತೇನು ನಾವು ನಿರ್ಧಾರ ಮಾಡಿದ್ದೇವೆ ಇದನ್ನು ವಾಪಸ್ ಪಡೆಯುವಂಥ ಯಾವುದೇ ಅಂಶ ನನಗೆ ಕಾಣುತ್ತಿಲ್ಲ. ಏಕೆಂದರೆ ಎಲ್ಲಾ ಪ್ರೊಸೀಜರ್‌ಗಳನ್ನು ನಾವು follow ಮಾಡಿದ್ದೇವೆ. ಟೆಂಡರ್ ಪಾಲಿಸಿಯಲ್ಲಿ ಯಾವುದೇ ಪ್ರೊಸೀಜರ್ ಲ್ಯಾಪ್ಸ್ ಆಗಿಲ್ಲ. ಅತಿ ಪಾರದರ್ಶಕತೆಯಿಂದ ಒಂದು ತಿಂಗಳು ಅವಕಾಶ ಕೊಟ್ಟು, ನಾಲ್ಕೈದು ಪೇಪರ್‌ಗಳಲ್ಲಿ ಜಾಹಿರಾತನ್ನು ಕೊಟ್ಟು ಎಲ್ಲಾ ರೀತಿಯ ಪ್ರೊಸೀಜರ್‌ಗಳನ್ನು ನಾವು follow ಮಾಡಿದ್ದೇವೆ. ಈ ಪ್ರೊಸೀಜರ್‌ನಲ್ಲಿ ನಾವು ಮೊದಲನೆಯ ಆದ್ಯತೆಯಲ್ಲಿ ಸಂಘ ಸಂಸ್ಥೆಗಳಿಗೆ ಕೊಡುತ್ತೇವೆ. ಇವೆಲ್ಲಾ ಅರ್ಜಿಗಳಲ್ಲಿ ಇಂಥವು ಯಾವ ಅರ್ಜಿಗಳು ಬರದಿದ್ದ ಕಾರಣ ಈ ಒಂದು ಪಿ.ಪಿ.ಪಿ. ಮಾಡೆಲ್‌ನಲ್ಲಿ ಭಾಗ್ಯಶ್ರೀ ಎನ್ನುವ ಕಂಪನಿಗೆ ನಾವು ಅವಕಾಶವನ್ನು ಕೊಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಚಿವರಿಗೆ ಬೆಳಿಗ್ಗೆ ತಿಂಡಿಯಾಗಿದೆ. ಮಧ್ಯಾಹ್ನ ಊಟಕ್ಕೆ ಹೋಗುತ್ತಿದ್ದಾರೆ. ಈ ಮಧ್ಯದಲ್ಲಿ ಇಷ್ಟು ವ್ಯತ್ಯಾಸವಾದರೆ ಹೇಗೆ? ಮಾನ್ಯ ಮಂತ್ರಿಗಳಿಗೆ ತಮ್ಮ ಸೀಟ್ ಯಾವುದೆಂಬುದೇ ಗೊತ್ತಾಗುತ್ತಿಲ್ಲವಲ್ಲ? ಬಹುಶಃ ಭಾರೀ ತಿಂಡಿಯೇ ಆಗಿರಬೇಕೆಂದು ಕಾಣುತ್ತದೆ ಅಥವಾ ಊಟಕ್ಕೆ ಅವಕಾಶವಿದೆಯೋ ಇಲ್ಲವೋ? ಏಕೆಂದರೆ ಮಾನ್ಯ ಸಚಿವರೆ, ತಮ್ಮ ಸೀಟನ್ನೇ ನೀವು ಮರೆತು ಬಿಟ್ಟಿದ್ದೀರಲ್ಲ? ಇಷ್ಟು ಮರೆವು ಬರಬೇಕೆಂದರೆ ಇನ್ನೆಷ್ಟು ನೀವು ಸ್ವಾಹ ಮಾಡಿರಬೇಕು ಲೆಕ್ಕ ಹಾಕಿಕೊಳ್ಳಿ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, 2006 ರಲ್ಲಿ ಇದೇ ರೀತಿ ಆರ್ಡರ್ ಮಾಡಿದ್ದರು. ಯಾರು ಕಾಂಟ್ರಾಕ್ಟ್ ಮಾಡಿಕೊಂಡಿದ್ದರೋ ಅವರ ಮುಖ್ಯ ಉದ್ದೇಶ ವಾಣಿ ವಿಲಾಸ ಜಲಾಶಯದಲ್ಲಿ ಇವರು ಸಣ್ಣ ಮೀನುಮರಿಗಳನ್ನು ಬಿಟ್ಟು ಅದನ್ನು ತೆಗೆಯಬೇಕು ಎನ್ನುವ ಉದ್ದೇಶ ಇವರದ್ದಾಗಿಲ್ಲ. ಜಲಾಶಯದಲ್ಲಿ ತುಂಬಾ ಹಳೆಯ ಮೀನುಗಳೇನಿವೆಯೋ ಅದನ್ನು ತೆಗೆಯುವುದಕ್ಕೋಸ್ಕರ ಕಾಂಟ್ರ್ಯಾಕ್ಟ್ ಮಾಡಿಕೊಳ್ಳುತ್ತಾರೆ. ಈಗಾಗಲೇ ಹೈಕೋರ್ಟ್‌ಗೆ ಹೋಗಲಾಗಿತ್ತು. ಹೈಕೋರ್ಟ್‌ನಲ್ಲಿ ಜೂನ್‌ವರೆಗೂ ಟೈಂ ಕೊಡಲಾಗಿತ್ತು. ಹಿಂದೆ ಪಿ.ಪಿ.ಪಿ. ಮಾಡೆಲ್‌ನಲ್ಲಿ ಕಾಂಟ್ರ್ಯಾಕ್ಟ್ ಮಾಡಿ ಕೊಂಡಿದ್ದರೂ ಕೂಡ ಅವರು ಹಳೆಯ ಮೀನುಗಳನ್ನು ಎತ್ತುವುದಕ್ಕೆ ಹೋದರು, ಗಲಾಟೆ ಮಾಡಿಕೊಂಡು ಹೊರಟು ಹೋದರು. ಅವರು ಮಾಡುವುದಕ್ಕೆ ಹೋಗಲಿಲ್ಲ. ಇವತ್ತು ಇಲಾಖೆಯ ಅಧಿಕಾರಿಗಳು ಯಾವ ಕಂಪನಿಗೆ ಕಂಡೀಶನ್ ಹಾಕಿ ಕೊಟ್ಟಿದ್ದರೋ ಆ ಇಲಾಖೆಯ ಹಿರಿಯ ಅಧಿಕಾರಿಗಳೇ ತಮ್ಮ ಸಂಬಂಧಿಕರನ್ನು ಇಟ್ಟುಕೊಂಡು ಈ ಫಾರ್ಮ್‌ನ್ನು ಮಾಡಿ ಅವರು ಖಾಸಗಿಯವರನ್ನು ಪಿ.ಪಿ.ಪಿ. ಮಾಡೆಲ್‌ನಲ್ಲಿ ಇದನ್ನು ತಂದಿರುವುದು. ದಯಮಾಡಿ ಈಗಲೂ ಕೂಡ ಅದೇ ಆಗುತ್ತದೆ. ಈ ಆದೇಶ ಹೇಗೆ ಮಾಡಿದರು ಎನ್ನುವುದಕ್ಕೆ ಅವರು ಈಗ ಕುಳಿತುಕೊಂಡ seat ವ್ಯತ್ಯಾಸ ದಲ್ಲಿ ಗೊತ್ತಾಗುತ್ತದೆ. ಆದುದರಿಂದ ನಾನು ಮತ್ತೊಮ್ಮೆ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಇದರಿಂದ ಬಹಳಷ್ಟು ಮೀನುಗಾರರು ಬೀದಿ ಪಾಲಾಗುತ್ತಾರೆ. ದಯಮಾಡಿ ಇದನ್ನು ಕೂಡಲೇ ಹಿಂಪಡೆದು ಪಾರದರ್ಶ ಕವಾಗಿ ಮಾಡಿದರೆ ಒಳ್ಳೆಯದು ಎಂದು ಅನಿಸುತ್ತದೆ. ಇಲ್ಲವೆಂದರೆ ನಿಮ್ಮ ಈ seatನ ವ್ಯತ್ಯಾಸದಲ್ಲಿಯೇ ನೀವು ಸರಿ ಮಾಡಿದ್ದೀರೋ ತಪ್ಪು ಮಾಡಿದ್ದೀರೋ ಎಂದು ಗೊತ್ತಾಗುತ್ತದೆ.

ಶ್ರೀ ಆನಂದ್ ಮಮಂತ್ ಅಸ್ನೋಟಿಕರ್ : 2009ರಲ್ಲಿ ಇದನ್ನು ನಾವು PPP model ನಲ್ಲಿ ನಾವು ಕೊಟ್ಟಿದ್ದೆವು. ನಾವು ಕೊಟ್ಟಂತಹ ಟೆಂಡರ್‌ನವರು ಮತ್ತೆ sub lease ಗೆ ಕೊಟ್ಟಿದ್ದರು. ಹಾಗಾಗಿ ನಮ್ಮ ಇಲಾಖೆಯವರು ಇದನ್ನು ರದ್ದುಪಡಿಸಿದ್ದಾರೆ. ನನ್ನ ಸ್ನೇಹಿತರಾದಂತಹ ಮಾನ್ಯ ಗೂಳಿಹಟ್ಟಿ ಶೇಖರ್ ರವರು ಏನು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ನಾನು ಮಾಹಿತಿಯನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ಮಂತ್ರಿಗಳೇ ಹೇಳಿ ಬಿಡಿ, ತಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಹೇಳಿದ್ದಾರಲ್ಲ, ತಾವು ದಯವಿಟ್ಟು ಕುಳಿತುಕೊಳ್ಳಿ, ಈಗ ನಾಡಗೌಡರವರೇ ಪ್ರಶ್ನೆ ಕೇಳಿ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಾರೆ. ಕೈಮುಗಿದು ಕೇಳುತ್ತೇನೆ.

ಅಧ್ಯಕ್ಷರು : ಸರಿ ಮಾಡುತ್ತೇನೆಂದು, ಪರಿಶೀಲಿಸುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಅವರು ಬೇರೆಯವರಿಗೆ ಮಾರಿ ಈ ರೀತಿ ಬಿಸಿನೆಸ್ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ಎಲ್ಲಾ detail ಗೊತ್ತು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಬೇಲೂರು dam ಬಗ್ಗೆ.. . . .

ಅಧ್ಯಕ್ಷರು : ಅವರು ಕೇಳಿದ ಪ್ರಶ್ನೆ ಬೇರೆ. ತಾವು ಬೇಲೂರಿಗೆ ಸಂಬಂಧಪಟ್ಟಂತೆ sudden ಆಗಿ ಕೇಳಿದರೆ ಉತ್ತರ ಎಲ್ಲಿರುತ್ತದೆ? ತಾವು ಕುಳಿತುಕೊಳ್ಳಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಸಮಸ್ಯೆ ಬಗೆಹರಿಯದಿದ್ದರೆ ಏನು ಮಾಡುವುದು?

ಅಧ್ಯಕ್ಷರು : ಏನು ಮಾಡುವುದು ಎಂದರೆ ತಾವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ಸ್ಥಗಿತಗೊಂಡಿರುವುದು

63 (413) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣಗಳೇನು;